ಭಾರತದ ಆಟಗಾರನೊಬ್ಬನ ಗರಿಷ್ಠ ಸಿಕ್ಸರ್‌ಗಳು ಎನಿಸಿಕೊಂಡಿತ್ತು. ಇಶಾನ್ ಬ್ಯಾಟ್‌ನಿಂದ ಹತ್ತು ಸಿಕ್ಸರ್‌ಗಳು ಬಂದದ್ದೇ ಆ ದಾಖಲೆಯೂ ಅಳಿಸಿಹೋಯಿತು.

ಏಕದಿನದ ಪಂದ್ಯಗಳಲ್ಲಿ ರೋಹಿತ್ ಶರ್ಮ 264 ರನ್ ಗಳಿಸಿರುವುದೇ ಇದುವರೆಗಿನ ಗರಿಷ್ಠ ಸ್ಕೋರ್ ಎಂಬ ದಾಖಲೆಯಾಗಿ ಉಳಿದಿದೆ. ಇಶಾನ್ ಅದನ್ನೂ ಮುರಿಯುವ ಅವಕಾಶ ಎದುರಲ್ಲಿ ಇತ್ತು. ಯಾಕೆಂದರೆ, ಇನ್ನೂ 14 ಓವರ್‌ಗಳು ಬಾಕಿ ಇದ್ದವು. ಟಸ್ಕಿನ್ ಅಹಮದ್ ಎಸೆತವೊಂದನ್ನು ಡೌನ್ ದಿ ವಿಕೆಟ್ ಬಂದು, ಹನ್ನೊಂದನೇ ಸಿಕ್ಸರ್‌ಗೆ ಎತ್ತುವ ಯತ್ನಕ್ಕೆ ಕೈಹಾಕಿದರು. ಅದು ಬಹುತೇಕ ಬೌಂಡರಿ ಗೆರೆಯನ್ನು ದಾಟಿ ಹೋಗುವುದರಲ್ಲಿ ಇತ್ತು. ಲಿಟನ್ ದಾಸ್ ಅದನ್ನು ಕ್ಯಾಚ್ ಆಗಿ ಪರಿವರ್ತಿಸಿದರು. ಒತ್ತಡದ ಸಂದರ್ಭದಲ್ಲಿ ಅವರು ಸಮಯಪ್ರಜ್ಞೆ ತೋರದೇ ಹೋಗಿದ್ದಿದ್ದರೆ ಇಶಾನ್ ಬ್ಯಾಟ್‌ನಿಂದ ಇನ್ನಷ್ಟು ದಾಖಲೆಗಳು ಮೂಡುವ ಎಲ್ಲ ಅವಕಾಶಗಳೂ ಡಿಸೆಂಬರ್ 10ರ ಶನಿವಾರ ಇದ್ದವು.

ಇಶಾನ್ ತಂದೆ ಪ್ರಣವ್ ಕುಮಾರ್ ಅವರಂತೂ ಮಗನನ್ನು ಚಿಕ್ಕಂದಿನಲ್ಲಿ 'ಜಗಮೊಂಡ' ಎಂದೇ ಕರೆಯುತ್ತಿದ್ದರು. ಅವರ ದೊಡ್ಡ ಮಗ ರಾಜ್ ಕೂಡ ಕ್ರಿಕೆಟಿಗ. ತನ್ನ ಕ್ರಿಕೆಟ್ ಬದುಕನ್ನು ಬದಿಗೊತ್ತಿ, ತಮ್ಮನ ವೃತ್ತಿಪರತೆಗೆ ನೀರೆರೆದದ್ದೇ ಅವರು. ತಂದೆ–ತಾಯಿಗೆ ಅನಿಶ್ಚಿತ ಭವಿಷ್ಯವಿರುವ ಕ್ರಿಕೆಟ್‌ನಲ್ಲಿ ಮಗ ತೊಡಗಿಕೊಳ್ಳುವುದು ಸುತರಾಂ ಇಷ್ಟವಿರಲಿಲ್ಲ. ಇಶಾನ್ ಮಾತ್ರ ಏಳನೇ ವಯಸ್ಸಿನಿಂದಲೇ ಕ್ರಿಕೆಟ್ ಅನ್ನು ಹಾಸಿ ಹೊದೆಯಲಾರಂಭಿಸಿದ್ದನ್ನು ಅಣ್ಣ ನೋಡಿದ್ದು ಒಳ್ಳೆಯದಾಯಿತು.

ಇಶಾನ್ ವರ್ತನೆಯ ಕುರಿತು ಕೆಲವು ಪ್ರಸಂಗಗಳಿವೆ. ಅವರಿಗೆ ಒಮ್ಮೆ ಕಿವಿ ಚುಚ್ಚಿಸಿಕೊಳ್ಳಬೇಕು ಎನಿಸಿತು. ಆಗಿನ್ನೂ ಆರನೇ ಕ್ಲಾಸಿನ ಹುಡುಗ. ಶಾಲೆಯಲ್ಲಿ ಅದಕ್ಕೆ ಅವಕಾಶ ಇರಲಿಲ್ಲ. ಬಲವಾದ ಕಾರಣ ಕೊಡಬೇಕಿತ್ತು. ಇಶಾನ್ ಮುಗ್ಧತೆಯನ್ನು ತುಳುಕಿಸುತ್ತಾ, 'ನನ್ನ ಅಜ್ಜಿಗೆ ನಾನು ಕಿವಿ ಚುಚ್ಚಿಸಿಕೊಳ್ಳಬೇಕು ಎಂಬ ಕೊನೆ ಆಸೆ ಇತ್ತು. ಅದನ್ನು ಈಗಲಾದರೂ ಈಡೇರಿಸಬೇಕು' ಎಂದು ಆಗ ಹೇಳಿದ್ದನ್ನು ಮೇಷ್ಟ್ರು–ಮೇಡಂಗಳು ಇನ್ನೂ ಮರೆತಿಲ್ಲ. ಆಗ ಇಶಾನ್ ಅಜ್ಜಿ ಇನ್ನೂ ಬದುಕಿದ್ದರು. ಅಕ್ಕ–ಪಕ್ಕದ ಮನೆಯವರೆಲ್ಲ ತಮ್ಮ ಮನೆಯ ಕಿಟಕಿಗೆ ಚೆಂಡು ಬಡಿಯಿತು, ಮಲಗಿರುವಾಗ ಬಾಗಿಲಿಗೆ ಬಿದ್ದು ನಿದ್ದೆ ಹಾಳಾಯಿತು, ಕಾರಿನ ಗಾಜು ಪುಡಿಪುಡಿಯಾದರೆ ಏನು ಗತಿ ಎಂದೆಲ್ಲ ದೂರುಗಳನ್ನು ತರುವುದು ಆಗ ಮಾಮೂಲಾಗಿತ್ತು. ಅವರಿಗೆಲ್ಲ ಉತ್ತರ ಹೇಳಿ ಹೇಳಿ ಇಶಾನ್ ಅಪ್ಪ–ಅಮ್ಮ ರೋಸಿಹೋಗಿದ್ದರು. ಹೀಗಾಗಿ ಅವರಿಗೂ ಕ್ರಿಕೆಟ್‌ಗೂ ಅಷ್ಟಕ್ಕಷ್ಟೆ.



ಇಶಾನ್‌ಗೆ ಕೊಹ್ಲಿ ಆಶೀರ್ವಾದ

ಇಂತಹ ಪ್ರತಿಕೂಲ ಪರಿಸ್ಥಿತಿಯ ನಡುವೆಯೂ ಇಶಾನ್ ತಮ್ಮಿಷ್ಟದ ಕ್ರಿಕೆಟ್ಟನ್ನೇ ಅಪ್ಪಿಕೊಂಡರು. ಶಾಲೆಗೆ ಎಂದೋ ಗುಡ್‌ಬೈ ಹೇಳಿಬಿಟ್ಟರು. ಬಿಹಾರ ಕ್ರಿಕೆಟ್ ಸಂಸ್ಥೆಯು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಅಡಿ ಬರಲು ಅಗತ್ಯವಿದ್ದ ನೋಂದಣಿ ಸಮಸ್ಯೆಯನ್ನು ಎದುರಿಸಿತು. ಆಗ ಸ್ನೇಹಿತರು, ಕೋಚ್ ಎಲ್ಲರೂ ಸೇರಿ ಇಶಾನ್‌ನನ್ನು ಜಾರ್ಖಂಡ್‌ಗೆ ಹೋಗಿ ಆಡುವಂತೆ ಪ್ರೇರೇಪಿಸಿದರು. ಕಾಯಿ ಹಣ್ಣಾದದ್ದೇ ಆಗ. ಮಹೇಂದ್ರ ಸಿಂಗ್ ಧೋನಿ ಆಡಿದ ಮೇಲೆ ಜಾರ್ಖಂಡ್ ಕ್ರಿಕೆಟ್ ಸಂಸ್ಥೆಯ ವರ್ಚಸ್ಸು ಸಾಕಷ್ಟು ಮೇಲೇರಿತ್ತು. ಅದೇ ಇಶಾನ್‌ಗೆ ವರದಾನವಾಯಿತು. ಅಲ್ಲಿಂದ ಅವರ ವೃತ್ತಿಬದುಕು 'ಸುಲಿದ ಬಾಳೆಯ ಹಣ್ಣಿನಂದದಿ' ಎನ್ನುವಂತಾಯಿತು. ನೋಡನೋಡುತ್ತಲೇ 19 ವರ್ಷದೊಳಗಿನವರ ತಂಡದ ನಾಯಕನಾಗಿ ಇಶಾನ್ ಬೆಳೆದುಬಿಟ್ಟರು. 2016ರಲ್ಲಿ ಬಾಂಗ್ಲಾದೇಶದ ನೆಲದಲ್ಲೇ ನಡೆದಿದ್ದ 19 ವರ್ಷದೊಳಗಿನವರ ವಿಶ್ವಕಪ್‌ನಲ್ಲಿ ತಂಡವನ್ನು ಮುನ್ನಡೆಸಿದ್ದ ಇಶಾನ್, ವೆಸ್ಟ್ ಇಂಡೀಸ್ ಎದುರು ಫೈನಲ್‌ನಲ್ಲಿ ಸೋತರೂ ನಾಯಕತ್ವದ ಗುಣದ ಮೆರವಣಿಗೆ ಮಾಡಿದ್ದರು.

**ದ್ವಿಶತಕ ಬಾರಿಸಿದ 9ನೇ ಸರದಾರ**

ರಣಜಿ ಕ್ರಿಕೆಟ್‌ಗೆ ಇಶಾನ್ ಪದಾರ್ಪಣೆ ಮಾಡಿದ್ದು 2015ರಲ್ಲಿ. ಮರುವರ್ಷವೇ ದೆಹಲಿ ವಿರುದ್ಧದ ಪಂದ್ಯದ ಒಂದು ಇನಿಂಗ್ಸ್‌ನಲ್ಲಿ 273 ರನ್‌ಗಳನ್ನು ಹರಿಸಿದರು. ಜಾರ್ಖಂಡ್‌ನ ಯಾವ ಆಟಗಾರನೂ ರಣಜಿಯಲ್ಲಿ ಅಷ್ಟು ದೊಡ್ಡ ಮೊತ್ತ ದಾಖಲಿಸಿರಲಿಲ್ಲ. 2017–18ರ ರಣಜಿ ಸರಣಿಯಲ್ಲಿ 484 ರನ್‌ಗಳನ್ನು ಬರೀ 6 ಪಂದ್ಯಗಳಿಂದ ಕಲೆಹಾಕಿದ ಅವರು, ಆ ಋತುವಿನಲ್ಲಿ ಜಾರ್ಖಂಡ್ ಪರ ಅತಿ ಹೆಚ್ಚು ರನ್ ಗಳಿಸಿದ ದಾಖಲೆ ಬರೆದರು. 2018–19ರ ವಿಜಯ್ ಹಜಾರೆ ಟ್ರೋಫಿಯಲ್ಲಿ ಒಂಬತ್ತು ಪಂದ್ಯಗಳಿಂದ 405 ರನ್ ಸೇರಿಸಿ ತಮ್ಮ ಸಾಮರ್ಥ್ಯ ರುಜುವಾತುಪಡಿಸಿದ್ದರು.

ಆರು ವರ್ಷಗಳ ಹಿಂದೆ ಗುಜರಾತ್ ಲಯನ್ಸ್ ತಂಡಕ್ಕೆ 'ಇಂಡಿಯನ್ ಪ್ರೀಮಿಯರ್ ಲೀಗ್' (ಐಪಿಎಲ್)ಗೆ 36 ಲಕ್ಷ ರೂಪಾಯಿ ಹರಾಜಿನಲ್ಲಿ ಇಶಾನ್ ಆಯ್ಕೆಯಾಗಿದ್ದರು. 2022ರಲ್ಲಿ ಮುಂಬೈ ಇಂಡಿಯನ್ಸ್ 15 ಕೋಟಿಗೂ ಹೆಚ್ಚು ಮೊತ್ತ ಕೊಟ್ಟು ಈ ಆಟಗಾರನನ್ನು ಖರೀದಿಸಿದ್ದು ಮನರಂಜನಾ ಕ್ರಿಕೆಟ್‌ನಲ್ಲೂ ಅವರ ಬೇಡಿಕೆ ಹೇಗಿದೆ ಎನ್ನುವುದಕ್ಕೆ ಸಾಕ್ಷಿ.

ಶಾಲಾ ದಿನಗಳಲ್ಲಿ ತಮ್ಮ ತಂಡದ ವಿಕೆಟ್ ಕೀಪರ್ ಗೈರುಹಾಜರಾದ ಕಾರಣಕ್ಕೆ ಗ್ಲೌಸ್ ತೊಟ್ಟು ಎರಡು ಕ್ಯಾಚ್‌ಗಳನ್ನೂ ಹಿಡಿದಿದ್ದ ಇಶಾನ್, ಆಮೇಲೆ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಗಿ ಬದಲಾದದ್ದು ಭಾರತ ತಂಡಕ್ಕೆ ಒಳಿತೇ ಆದಂತಾಗಿದೆ. ರೋಹಿತ್ ಶರ್ಮ ಫಾರ್ಮ್ ಅಲ್ಲಾಡುತ್ತಿರುವ ಈ ಹೊತ್ತಿನಲ್ಲಿ ಅವರಿಗೆ ಗಾಯವಾದದ್ದರಿಂದ ಏಕದಿನ ಪಂದ್ಯದಲ್ಲಿ ಇನಿಂಗ್ಸ್ ಆರಂಭಿಸುವ ಅವಕಾಶ ಇಶಾನ್ ಅವರಿಗೆ ಲಭಿಸಿತು. ಅದನ್ನು ಅವರು ಕಣ್ಣು ಮಾಡಿಕೊಂಡಿರುವುದನ್ನು ನೋಡಿದರೆ, ಕ್ರಿಕೆಟ್‌ನ ಪೋಟಿ ಎಂಥದೆನ್ನುವುದು ಅರ್ಥವಾದೀತು.

ಪ್ರತಿಕ್ರಿಯಿಸಿ: feedback@sudha.co.in


ಬೆವರಿಳಿಸಿದ ನಂತರ ಆರಾಮು...